# ಬದುಕಿಗೆ ದಾರಿ ತೋರಿದ ಬೆಳಕು...

‘ಕನ್ನಡದ ಕಣ್ವ’ ಬಿ.ಎಂ.ಶ್ರೀಯವರ ‘ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು, ಇರುಳು ಕತ್ತಲೆಯಾ ಗವಿ ಮನೆ ದೂರ ಕನಿಕರಿಸಿ ಕೈ ಹಿಡಿದು ನಡೆಸೆನ್ನನು’ –ನನಗೆ ಬಹಳ ಇಷ್ಟವಾದ ಹಾಡು.


ಸದಾ ಕಾಲ ಮನದಲ್ಲಿ ಗುನುಗುವ ಹಾಡೆಂದರೂ ತಪ್ಪಲ್ಲ. ಈ ಹಾಡನ್ನು ಮೊದಲ ಸಲ ಒಂದು ಸಮಾರಂಭದಲ್ಲಿ ಒಬ್ಬ ಪುಟ್ಟ ಹುಡುಗಿ ಹಾಡಿದ್ದು ಕೇಳಿದ ನನಗೆ ಈ ಹಾಡು ತುಂಬಾ ಮನತಟ್ಟಿತ್ತು. ಯಾಕೆಂದರೆ, ಈ ಹಾಡನ್ನು ಹೇಳಿದ್ದು ಒಬ್ಬ ಕಣ್ಣು ಕಾಣದ ಹುಡುಗಿ. ಬೆಳಕೇ ಕಾಣದ ಹುಡುಗಿ ಆ ಕರುಣಾಳು ಭಗವಂತನನ್ನು ಬೆಳಕು ತೋರಿಸಲು ಕೇಳಿಕೊಂಡಿದ್ದಳು.

ನನ್ನ ಬದುಕಿನಲ್ಲಿ ಎಷ್ಟೋ ಸಲ ಏನೂ ದಾರಿ ಕಾಣದಿದ್ದಾಗ, ಅಸಹಾಯಕಳಾದಾಗ ಈ ಹಾಡು ನನಗೆ ದಾರಿ ತೋರಿಸಿದೆ. ನನ್ನ ಯಜಮಾನರು ತುಂಬಾ ಹುಷಾರಿಲ್ಲದೇ ಇದ್ದಾಗ, ನನಗೆ ಅತಿ ಅವಶ್ಯಕತೆ ಇದ್ದದ್ದರಿಂದ ನನ್ನ ಕೆಲಸದಿಂದ ಸ್ವಇಚ್ಛಾ ನಿವೃತ್ತಿ ಕೋರಿ ಮೇಲಧಿಕಾರಿಗಳಲ್ಲಿ ಎರಡು ಸಲ ಮನವಿ ಸಲ್ಲಿಸಿದ್ದೆ. ಆದರೆ ಕಚೇರಿಯ ಹಿತದೃಷ್ಟಿಯಿಂದ ಕೆಲವು ಕಾರಣಗಳನ್ನು ನೀಡಿ ಇದನ್ನು ನಿರಾಕರಿಸಲಾಗಿತ್ತು. ದಿಕ್ಕು ತೋಚದಂತಾಗಿ ನನಗಾಸರೆಯಾಗಿದ್ದ ಈ ಹಾಡು ‘ಕರುಣಾಳು ಬಾ ಬೆಳಕೆ ಮುಸುಕಿದೀ...’ ಹೇಳಿಕೊಳ್ಳುತ್ತಾ ದೇವರಲ್ಲಿ ಕೇಳಿಕೊಂಡೆ.

ನನ್ನ ಮೊರೆ ಕೇಳಿಸಿ ಆ ಕರುಣಾಳು ಮತ್ತೊಬ್ಬ ಅಧಿಕಾರಿಯ ರೂಪದಲ್ಲಿ ಬಂದು ನನ್ನ ಮನವಿಯನ್ನು ಅಂಗೀಕರಿಸುವಂತೆ ಆಯಿತು. ಇದೇ ಈ ಹಾಡಿನ ಶಕ್ತಿ. ನನ್ನ ಆರ್ತ ದನಿಗೆ ಆ ಕರುಣಾಳು ತೋರಿದ ದಾರಿ. ಆದ್ದರಿಂದ ಈ ಹಾಡು ನನ್ನ ಬದುಕಿಗೆ ದಾರಿ ತೋರುವ ಹಾಡು.

–ಶಾಂತಾ ಗಿರೀಶ್

# ಮನೋಸ್ಥೈರ್ಯ ಮೂಡಿಸಿದ ಕವಿತೆ



ಅಳುವ ಕಡಲೊಳು ತೇಲಿ
ಬರುತಲಿದೆ ನಗೆಯ ಹಾಯಿ
ದೋಣಿ...

ಎಂ. ಗೋಪಾಲಕೃಷ್ಣ ಅಡಿಗರ ಈ ಕವನ ನನಗೆ ಪ್ರಿಯವಾದದ್ದು. ನೋವು ಸಂಕಟಗಳಿರದ, ಆಡಾಡುತ್ತಾ ಕಾಲ ಕಳೆಯುವಾಗಿನ ಸಂದರ್ಭದಲ್ಲೂ ನನಗೆ ಈ ಕವಿತೆ ಬಹಳ ಇಷ್ಟವಾಗಿತ್ತು. ನಂತರ ಈ ಕವನವನ್ನು ಶಿವಮೊಗ್ಗ ಸುಬ್ಬಣ್ಣನವರ ಧ್ವನಿಯಲ್ಲಿ ಆಲಿಸಿದಾಗಂತೂ ಇನ್ನೂ ಹೃದಯಂಗಮವೆನಿಸಿ ಮನಸ್ಸಿನಲ್ಲಿ ಸ್ಥಿರವಾಗಿ ನಿಂತಿತು.

ಯಾಕೆ ನನಗೆ ಈ ಕವನ ಇಷ್ಟವಾಯಿತೆಂದರೆ, ಮೊದಲನೆಯದಾಗಿ ಓದುವುದಕ್ಕೆ ಮತ್ತು ಆಲಿಸುವುದಕ್ಕೆ ಮಧುರವಾಗಿದೆ ಎಂಬುದು. ಎರಡನೆಯದ್ದು, ಒಳಾರ್ಥದ್ದು. ಈ ಕವನವನ್ನು ಓದುತ್ತಾ ಹೋದಂತೆ ನನ್ನೊಳಗಿರುವ ವಿಷಾದ, ವಿಕ್ಷಿಪ್ತತೆಗಳು ನಿಧಾನವಾಗಿ ಹೊಸ ಧನಾತ್ಮಕ ನಿರೀಕ್ಷೆಗಳಾಗಿ ಪರಿವರ್ತನೆಗೊಳ್ಳುತ್ತವೆ.

ಟಿಸಿಎಚ್ ಮುಗಿದು ಎಲ್ಲ ಜಿಲ್ಲೆಗಳಿಗೂ ಡಿಎಲ್‌ಆರ್‌ಸಿ ಅಪ್ಲಿಕೇಶನ್‌ಗಳನ್ನು ಗುಜರಾಯಿಸಿ ನಿರೀಕ್ಷಿಸುತ್ತಿರಬೇಕಾದರೆ, ನನ್ನ ಜೊತೆಗೆ ಅರ್ಜಿ ಹಾಕಿದವರಿಗೆಲ್ಲ ಸಂದರ್ಶನಕ್ಕೆ ಕರೆ ಬಂದರೂ, ನನಗೆ ಮಾತ್ರ ಬರಲಿಲ್ಲ. ಬೆಂಗಳೂರಿಗೆ ಹಾಕಿಕೊಳ್ಳಿ ಎಂದು ಎಲ್ಲರೂ ಹೇಳಿದರೂ ನನಗೆ ಇಷ್ಟವಿರಲಿಲ್ಲ. ತಿಂಗಳುರುಳಿದ ನಂತರ ಹೀಗೇ ಒಂದು ಸುಂದರ ಬೆಳಗಿನಲ್ಲಿ ನನಗೆ ಸಂದರ್ಶನ ಪತ್ರ ಬಂದಿತು. ಅದು ಎಲ್ಲಿಂದ? ಚಿಕ್ಕಮಗಳೂರಿನ ಆಫೀಸಿನಿಂದ! ನನ್ನ ಪ್ರೀತಿಯ ಸ್ಥಳ, ನಮ್ಮಕ್ಕ ಇದ್ದ ಊರದು! ಕಾದದ್ದಕ್ಕೂ ಸಾರ್ಥಕವೆನಿಸಿತು.

ಆಗ ನನಗೆ ನಿಜಕ್ಕೂ ನೆನಪಾದ ಈ ಸಾಲು ಅದೆಷ್ಟು ಮುದಗೊಳಿಸಿತೆಂದರೆ, ‘ಅಳುವ ಕಡಲೊಳು ತೇಲಿ ಬರುತಲಿದೆ ನಗೆಯ ಹಾಯಿ ದೋಣಿ...’ ಅದೆಷ್ಟೇ ನೋವು ಸಂಕಟಗಳಿರಲಿ, ಇದೊಂದು ಸಾಲು ಮಾತ್ರ ಬದುಕಿಗೆ ಸ್ಫೂರ್ತಿ ನೀಡುತ್ತದೆ. ಬದುಕಿನಲ್ಲಿ ಮನುಷ್ಯನಿಗೆ ಅವಶ್ಯವಿರುವುದು ಆತ್ಮಸ್ಥೈರ್ಯ. ಅದನ್ನು ಈ ಸಾಲುಗಳು ನೀಡುತ್ತವೆ.

–ಬಿ.ಕೆ. ಮೀನಾಕ್ಷಿ, ಮೈಸೂರು

# ಜೀವನೋತ್ಸಾಹ ತುಂಬುವ ಸಾಲು

‘ಯಾರಿಗುಂಟು ಯಾರಿಗಿಲ್ಲ ಬಾಳೆಲ್ಲ ಬೇವು ಬೆಲ್ಲ|
ಬಂದದ್ದೆಲ್ಲಾ ಈಸ ಬೇಕಯ್ಯ ಗೆಣೆಯಾ ಇಲ್ಲದ್ದಕ್ಕೆ ಚಿಂತೆ ಯಾಕಯ್ಯ|
ಗೋಣು ಹಾಕಿ ಕೂರ ಬ್ಯಾಡ ಗತ್ತಿನಾಗ ಬಾಳ ನೋಡ|
ಏಳು ಬೀಳು ಇರುವುದೇನೆ ಇಲ್ಲಿ ಹುಟ್ಟಿ ಬಂದ ಮೇಲೆ|
ಸುಖ ದುಃಖ ಕಾಣೋದೇನೆ ಉಪ್ಪು ಖಾರ ತಿಂದ ಮೇಲೆ|
ಕಷ್ಟ ಮೆಟ್ಟಿ ಸಾಗ ಬೇಕಯ್ಯ ಓ ಗೆಣೆಯ|
ಕೈಯ ಚೆಲ್ಲಿ ಕೂರಗ ಬೇಡಯ್ಯ|’

– ಕವಿ ದೊಡ್ಡರಂಗೇಗೌಡರ ಈ ಕವಿತೆ ದುರ್ಬಲ ಸಮಯದಲ್ಲಿ, ಅತ್ಯಂತ ಬೇಸರದ ಸಂದರ್ಭಗಳಲ್ಲಿ ಜೀವನೋತ್ಸಾಹ ತುಂಬುವ ಕವಿತೆ. ಏಳು ಬೀಳು, ಕಷ್ಟ ನಷ್ಟ, ಸುಖ ದುಃಖ ಇವೆಲ್ಲ ಎಲ್ಲರಿಗೂ ಬರುವಂತಹುದು, ಅದನ್ನು ಸಹಿಸಿಕೊಂಡು ಮುನ್ನುಗ್ಗಬೇಕು ಎಂದು ಸರಳವಾಗಿ ಹೇಳುವ ಈ ಕವನದ ಸಾಲುಗಳು ಕಷ್ಟದ ಸಮಯದಲ್ಲಿ ಮನೋಸ್ಥೈರ್ಯ ತುಂಬುತ್ತವೆ. ಸಂಕಟ ಎದುರಾದ ಸಂದರ್ಭದಲ್ಲೆಲ್ಲಾ ನಾನು ಈ ಹಾಡನ್ನು ಗುನುಗಿಕೊಂಡು ನನಗೆ ನಾನೇ ಸಾಂತ್ವನ ಹೇಳಿಕೊಂಡಿದ್ದೇನೆ. ಆಗೆಲ್ಲಾ ಈ ಸಾಲುಗಳು ಊರುಗೋಲಾಗಿ ನನ್ನಲ್ಲಿ ಪುನಃ ಉತ್ಸಾಹ ತುಂಬಿವೆ.

–ಎಚ್.ಎಸ್. ನಂದಕುಮಾರ್, ಮಂಗಳೂರು

# ಹೇಳದೇ ಉಳಿದ ಮಾತು



ಎಷ್ಟೋ ಬಾರಿ ನಮಗೆ ಈ ಸಂದಿಗ್ಧ ಎದುರಾಗುತ್ತದೆ. ಹಿರಿಯರ ಬಳಿಯೋ, ಪ್ರೀತಿಪಾತ್ರರ ಬಳಿಯೋ, ಗುರುಗಳ ಬಳಿಯೋ ನಮ್ಮ ಮನಸ್ಸಿನ ಭಾವನೆಗಳನ್ನು ಹಂಚಿಕೊಳ್ಳಬೇಕು, ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು ಅಂದುಕೊಳ್ಳುತ್ತೇವೆ. ನಮ್ಮ ಕನಸು, ಭಾವನೆ, ಆಲೋಚನೆ, ಚಿಂತನೆ, ಆಶಯ, ಅಭಿಪ್ರಾಯ, ಅನಿಸಿಕೆ ಹೇಳಲು ಸಾಧ್ಯವಾಗದೇ ಇರುವ ಸಂದರ್ಭ ಬಂದುಬಿಡುತ್ತದೆ. ಹೇಳಬೇಕು, ಹಂಚಿಕೊಳ್ಳಬೇಕು ಅನಿಸುವಷ್ಟರಲ್ಲಿ ಆ ವ್ಯಕ್ತಿ, ಪ್ರೀತಿಪಾತ್ರರು, ಹಿರಿಯರು ಇಲ್ಲವಾಗುತ್ತಾರೆ. ಆಗ ಆ ಭಾವನೆ ಮನಸ್ಸಲ್ಲೇ ಉಳಿದು ಹಪಹಪಿಸುವಂತಾಗುತ್ತದೆ. ಇಂತಹ ಸನ್ನಿವೇಶ ಅನೇಕರ ಬದುಕಿನಲ್ಲಿ ನಡೆದಿರಬಹುದಲ್ಲವೇ? ಹೇಳದೇ ಉಳಿದ ನಿಮ್ಮ ಮನದಾಳದ ಆ ಮಾತನ್ನು ನಮ್ಮೊಂದಿಗೆ ಹಂಚಿಕೊಳ್ಳಿ. ಬರಹ 150ರ ಪದಮಿತಿಯಲ್ಲಿರಲಿ. ಕೊನೆಯ ದಿನಾಂಕ ಡಿಸೆಂಬರ್ 25. ಲೇಖನವನ್ನು ನುಡಿ ಅಥವಾ ಯುನಿಕೋಡ್‌ನಲ್ಲಿ editorsu@sudha.co.inಗೆ ಮೇಲ್ ಮಾಡಿ.